## 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**Misc 47/2024** **PW- 1**

ದಿಃ **18.03.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿಸವಾಲುಃ ಎದುರುದಾರರ ಪರ ಶ್ರೀ ಆರ್ ಆರ್ ಜೆ ವಕೀಲರಿಂದಃ**

ನಾನು ಬಿ.ಕಾಂ ಪದವೀಧರ. ಈ ಅರ್ಜಿಗೆ ನಮ್ಮ ವಕೀಲರು ಮಾಹಿತಿ ಕೊಟ್ಟಿದ್ದಾರೆ. ಇದರಲ್ಲಿ ಬರೆದ ವಿಷಯಗಳು ಗೊತ್ತು. ಅಸಲು ದಾವಾ 891/2011 ದಾಖಲಾದ ಮೇಲೆ ನಮ್ಮ ವಕೀಲರು ಹಾಜರಾಗುತ್ತಿದ್ದು ನಾನು ಒಂದೆರಡು ಬಾರಿ ಬಂದು ಹೋಗಿದ್ದೇನೆ. ನನ್ನ ಮುಖ್ಯ ಹೇಳಿಕೆಯ 4 ನೇ ನುಡಿಗಟ್ಟಿನಲ್ಲಿ ಹೇಳಿದಂತೆ ನನಗೆ ಆರಾಮ ಇರಲಿಲ್ಲ. ಮೇಲಿಂದ ಮೇಲೆ ತಲೆನೋವು, ಹಿಮೊಗ್ಲೊಬಿನ್ ಕಡಿಮೆಯಾಗಿತ್ತು. ವೈದ್ಯರ ಬಳಿ ತೊರಿಸಿದ್ದು ಆದರೆ ಪ್ರಮಾಣಪತ್ರ ಪಡೆದಿಲ್ಲ. ನನ್ನ ಮುಖ್ಯ ಹೇಳಿಕೆಯ ನುಡಿಗಟ್ಟು 5 ರಲ್ಲಿ ಹೇಳಿದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನಮ್ಮ ವಕೀಲರ ಕಚೇರಿ ಮೊದಲು ಕುಂದಗೋಳ ಕಾಂಪ್ಲೆಕ್ಸ ನಲ್ಲಿ ಇದ್ದು ಅದು ವಿದ್ಯಾನಗರಕ್ಕೆ ಶಿಪ್ಟ ಆದ ಬಗ್ಗೆ ಬಹಳ ತಡವಾಗಿ ಗೊತ್ತಾಯಿತು. 2024 ರಲ್ಲಿ ಶ್ರೀ ಬಾಣದ ವಕೀಲರನ್ನು ಕೇಳಿದೆ ಅವರು ಶಿಪ್ಟ ಆದ ಬಗ್ಗೆ ಹೇಳಿದರು. ನನ್ನ ಹಳೆಯ ವಿಳಾಸದ ಬಗ್ಗೆ ನಾನು ದಾಖಲಾತಿ ಕೊಟ್ಟಿಲ್ಲ. ಎದುರುದಾರನಿಗೆ ತೊಂದರೆ ಮಾಡುವ ಸಲುವಾಗಿ ನಾನು ಬೇಕಂತಲೇ ಕಾಲವಿಳಂಬ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಕಾಲವಿಳಂಬ ಆಗಿದ್ದರೂ ಸಹ ವಕೀಲರ ಮೇಲೆ ಆರೋಪಣೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

**(**ಶ್ರೀ ರಮೇಶ ಎಸ್ ಗಾಣಿಗೇರ**)**
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.